**ಅಸಲು ದಾವಾ ಸಂಖ್ಯೆ: 938/2021**
**ಪಿಡಬ್ಲೂ-2**

**ದಿಃ 12-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ. TAK ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

**ಪಾಟೀ ಸವಾಲು 2ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ವಿ ಬಿ ಎಸ್ ರವರಿಂದ**

1. ಈ ದಾವೆಯ ವಾದಿಯು ನಮ್ಮ ಹೋಟೆಲನ ಕೆಳಗಡೆ ಅವರ ವ್ಯಾಪಾರ ಇರುವುದರಿಂದ ನನಗೆ ಅವರ ಪರಿಚಯ ಇರುತ್ತದೆ. ನನಗೆ ವಾದಿಯ ಪರಿಚಯ ಜನೇವರಿ -2021 ರಿಂದ ಇರುತ್ತದೆ. ವಾದಿ ದಾವಾ ಸ್ವತ್ತಿನಲ್ಲಿ ಹೊಟೇಲ ನಡೆಸುತ್ತಾರೆ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಈ ದಾವೆಯ ಪ್ರತಿವಾದಿಯರ ವಿರುದ್ಧ ನಾನೂ ಸಹ ಒಂದು ದಾವೆ ಹೂಡಿರುತ್ತೇನೆ ಹಾಗೂ ಸದರಿ ದಾವೆ ಮಾನ್ಯ 1ನೇ ಅಧಿಕ ಸಿವಿಲ್ ನ್ಯಾಯಾಲಯ ಬೆಳಗಾವಿ ಇಲ್ಲಿ ಅಸಲು ದಾವಾ ಸಂಖ್ಯೆ 939/2021 ರಂತೆ ಇರುತ್ತದೆ ಎಂದರೆ ಸರಿ. ನಾನು ಹೂಡಿದ ದಾವೆಗೆ ಸಹಾಯವಾಗಲಿ ಎಂಬ ಉದ್ದೇಶದಿಂದ ನಾನು ಇಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೋಟೇಲ ವ್ಯಾಪಾರ ನಡೆಸುವ ಸಲುವಾಗಿ ಸರ್ಕಾರದಿಂದ ಲೈಸೆನ್ಸ ಪಡೆದಿರುತ್ತೇನೆ. ನನಗೆ ಸದ್ಯಕ್ಕೆ ಲೈಸೆನ್ಸ ನಂಬರ ನೆನಪಿರುವುದಿಲ್ಲ. ಸದರಿ ಲೈಸೆನ್ಸ/ಪರವಾನಿಗೆಯನ್ನು ನಾನು ಅಸಲು ದಾವಾ ಸಂಖ್ಯೆ 939/2021 ಅಥವಾ ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ನನ್ನ ಬಳಿ ಆ ರೀತಿ ಯಾವುದೇ ಲೈಸೆನ್ಸ ಇರದ ಕಾರಣ ನಾನು ಅದನ್ನು ಯಾವುದೇ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಬ್ಜೆಯಲ್ಲಿ ಇರುತ್ತೇನೆ ಎಂದು ಹೇಳಲಾದ ಸ್ವತ್ತಿಗೆ ಸಂಬಂಧಪಟ್ಟಂತೆ ಲೀಸ್ ಕರಾರು ಪತ್ರವು

ಮಾರ್ಚ-2021 ರಲ್ಲಿ ಆಗಿರುತ್ತದೆ ಹಾಗೂ ಅದರ ದಿನಾಂಕ 26-03-2021 ಆಗಿರಬಹುದು. ನಾನು ವಾದಿಯ ಅಂಗಡಿಗೆ ಸೇರಿದ ದಾಖಲೆಗಳನ್ನು ನೋಡಿರುತ್ತೇನೆ. ವಾದಿಯ ಹೆಸರಿಗೆ ಆಗಿರುವ ಲೀಸ್ ಕರಾರು ಪತ್ರವನ್ನು ನಾನು ನೋಡಿರುವುದಿಲ್ಲ. ಜನೇವರಿ -2021 ರಿಂದ ನಾನು ಸದರಿ ಸ್ವತ್ತಿನ ಕಬ್ಜೆಯಲ್ಲಿ ಇರುತ್ತೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ಜನೇವರಿ -2021 ರಿಂದ ನಾನು ಸಿಟಿಎಸ್ ನಂಬರ 2767/4 ರ ಸ್ವತ್ತಿನ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ 1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ವಿರುದ್ಧ ಒಂದು ದಾವೆ ಹೂಡಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಯು 4ನೇ ಹಿರಿಯ ಸಿವಿಲ್ ನ್ಯಾಯಾಲಯ ಬೆಳಗಾವಿ ಇಲ್ಲಿ ಅಸಲು ದಾವಾ ಸಂಖ್ಯೆ 75/2021 ರಂತೆ 2ನೇ ಪ್ರತಿವಾದಿಯ ವಿರುದ್ದ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ತನಗೆ ದಾವೆಯ ಸಂಖ್ಯೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ 1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ವಿರುದ್ಧ ಈ ದಾವಾ ಸ್ವತ್ತನ್ನು ಮಾರಾಟ ಮಾಡಬಾರದು ಎಂದು ನಿರ್ಭಂದಕಾಜ್ಞೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ 1ನೇ ಪ್ರತಿವಾದಿಯು ಹಾಗೂ ಆತನ ಹೆಂಡತಿ ಸೇರಿಕೊಂಡು 2ನೇ ಪ್ರತಿವಾದಿಯ ಹೆಸರಿಗೆ ದಿಃ02-01-2021 ರಂದು ದಾವಾ ಸ್ವತ್ತಿನ ಕುರಿತು ದಾನಪತ್ರ ಮಾಡಿರುತ್ತಾರೆ ಎಂದರೆ ಸಾಕ್ಷಿ ದಾನಪತ್ರ ಮಾಡಿರುತ್ತಾರೆ ಆದರೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾನಪತ್ರವಾದ ನಂತರ 1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ವಿರುದ್ಧ ಸದರಿ ದಾನಪತ್ರವು ಸೃಷ್ಟಿಮಾಡಲಾದ ದಾಖಲೆ ಆಗಿರುತ್ತದೆ ಎಂದು ಹೇಳಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯು ದಿಃ 22-02-2021 ರಂದು ಆಗಿದ್ದು, ಅದಾದ ನಂತರ ದಿಃ26-03-2021 ಈ ದಾವೆಯ ವಾದಿಯ ಹೆಸರಿಗೆ ಲೀಸ್ ಡೀಡ್ ಆಗಿರುತ್ತದೆ ಎಂದರೆ ಸಾಕ್ಷಿ ತನಗೆ ದಿನಾಂಕಗಳು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಒಂದು ಸೃಷ್ಟಿತ

ಲೀಸ್ ಡೀಡ್ ಮಾಡಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಆದ್ದರಿಂದ ನಾನು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**